# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1235 |
| ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18-03-2025. |
| ಉತ್ತರಿಸುವ ಸಚಿವರು | : | ಪೌರಾಡಳಿತ ಹಾಗೂ ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರತಿದಿನ ಎಷ್ಟು ಟನ್ ಕಸ ಸಂಗ್ರಹಣೆಯಾಗುತ್ತಿದೆ; ಎಷ್ಟು ಟನ್ ಕಸ ವಿಲೇವಾರಿ ಮಾಡಲಾಗುತ್ತಿದೆ; ಕಳೆದ ಮೂರು ವರ್ಷದಿಂದ ಕಸ ವಿಲೇವಾರಿಗೆ ವೆಚ್ಚ ಮಾಡಿರುವ ಹಣ ಎಷ್ಟು; | • ರಾಜ್ಯದ 315 ನಗರ ಸ್ಥಳಿಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸುಮಾರು 7200 ಟನ್‌ಗಳಷ್ಟು ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಸುಮಾರು 6100 ಟನ್ ಗಳಷ್ಟು ತ್ಯಾಜ್ಯ ಸಂಸ್ಕರಣೆಯಾಗುತ್ತಿದೆ.<br>• ಕಳೆದ ಮೂರು ವರ್ಷಗಳಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಉತ್ಪಾದನೆಯಾಗುವ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ, ಸಾಗಾಣಿಕೆ ಮಾಡಿ, ಸಂಸ್ಕರಣೆ ಮಾಡಲು ಸುಮಾರು ರೂ. 1371.00 ಕೋಟಿಗಳು ವೆಚ್ಚವಾಗಿರುವುದಾಗಿ ವರದಿಯಾಗಿರುತ್ತದೆ. |
| (ಆ) | ಪರಿಸರಕ್ಕೆ ಹಾನಿ ಉಂಟು ಮಾಡುವ ಘನ ಹಾಗೂ ದ್ರವತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡದ ಕಾರಣಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ದಂಡವಿಧಿಸಿರುವುದು ನಿಜವೇ ; ಎಷ್ಟು ದಂಡ ವಿಧಿಸಿದೆ; | • ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಮತ್ತು ದ್ರವತ್ಯಾಜ್ಯ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿನ ಕೊರತೆಯನ್ನು ಅವಲೋಕಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು OA ಸಂಖ್ಯೆ: 606/2018ರ ಪ್ರಕರಣದಲ್ಲಿ ರೂ. 2900 ಕೋಟಿಗಳ ಪರಿಸರ ಪರಿಹಾರ ಮೊತ್ತವನ್ನು ವಿಧಿಸಿರುತ್ತದೆ. |
| (ಇ) | ಎನ್.ಜಿ.ಟಿ. ಹಲವು ಬಾರಿ ಎಚ್ಚರಿಕೆ ನೀಡಿದರೂ ಸಮರ್ಪಕವಾಗಿ ಕಸವಿಲೇವಾರಿ ಮಾಡುವಲ್ಲಿ ವಿಫಲವಾಗಲು ಕಾರಣವೇನು; | • ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ನಿರ್ವಹಣೆಗೆ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲದ ಕೊರತೆಯಿರುವುದು ಪ್ರಮುಖ ಅಡಚಣೆಯಾಗಿರುತ್ತದೆ.<br>• ತ್ಯಾಜ್ಯ ಸಂಸ್ಕರಣಾ ಜಾಗಗಳ ಕೊರತೆ, ಹಾಗೂ ಕೆಲವೆಡೆ ಜಾಗ ಇದ್ದರೂ ಅಲ್ಲಿ ತ್ಯಾಜ್ಯ ವಿಲೇವಾರಿ ಮಾಡಲು ಸುತ್ತಮುತ್ತಲಿನ ಗ್ರಾಮಸ್ಥರ ವಿರೋಧದಿಂದ ನ್ಯಾಯಾಲಯಗಳಲ್ಲಿ ಹಲವು ಪ್ರಕರಣಗಳು ದಾಖಲಾಗಿರುವುದು ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿರುತ್ತದೆ.<br>• ಆದಾಗ್ಯೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉತ್ಪಾದನೆಯಾಗುತ್ತಿರುವ ತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಬಹಳಷ್ಟು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

| | | |
|---|---|---|
| (ಈ) | ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಕಸ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಕಸ ವಿಲೇವಾರಿಗೆ ಟೆಂಡರ್ ಕರೆಯಲಾಗಿದೆಯೇ; ಯಾವ ಜಿಲ್ಲೆಯಲ್ಲಿ ಯಾರಿಗೆ ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ? (ಸಮಗ್ರ ವಿವರ ನೀಡುವುದು) | • ಕೇಂದ್ರವು ಜಾರಿಗೆ ತಂದಿರುವ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು, 2016 ರನ್ವಯ ರಾಜ್ಯ ಸರ್ಕಾರವು ಘನತ್ಯಾಜ್ಯ ನಿರ್ವಹಣೆ ರಾಜ್ಯನೀತಿ ಮತ್ತು ಕಾರ್ಯತಂತ್ರಗಳನ್ನು ಜಾರಿಗೊಳಿಸಿದೆ. ಜೊತೆಗೆ ಮಾದರಿ ಘನತ್ಯಾಜ್ಯ ನಿರ್ವಹಣೆ ಉಪವಿಧಿಗಳನ್ನು (SWM Bylaws) ಕೂಡ ಅಧಿಸೂಚಿಸಲಾಗಿದೆ.<br>• ಮಾದರಿ ಉಪವಿಧಿಗಳ (Model Bylaws) ಪ್ರಕಾರ, ಪ್ರತಿ ತ್ಯಾಜ್ಯ ಉತ್ಪಾದಕರಿಗೆ ಮಾಸಿಕ ಬಳಕೆದಾರರ ಶುಲ್ಕ (SWM User Fee) ನಿಗದಿಪಡಿಸಲಾಗಿದೆ. ಹಾಗೆಯೇ, ಮೂಲದಲ್ಲಿ ತ್ಯಾಜ್ಯ ವಿಂಗಡಿಸದಿರುವುದು, ಕಸವನ್ನು ಎಲ್ಲೆಂದರಲ್ಲಿ ಎಸೆಯುವುದು ಅಥವಾ ಸುಡುವುದನ್ನು ಮಾಡಿದರೆ, ನಿಯಮ ಉಲ್ಲಂಘನೆ ಮಾಡಿದವರ ವಿರುದ್ಧ ದಂಡ ವಿಧಿಸುವ ಅವಕಾಶವನ್ನು ಕಲ್ಪಿಸಲಾಗಿದೆ.<br>• ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗೆ ಬೇಕಿರುವ ವಾಹನಗಳು ಹಾಗೂ ಯಂತ್ರೋಪಕರಣಗಳು ಖರೀದಿಸಲಾಗುತ್ತಿದೆ. ಹಾಗೆಯೇ, ತ್ಯಾಜ್ಯ ಸಂಸ್ಕರಣೆಗೆ ಅಗತ್ಯವಿರುವ ವಿಂಡ್ರೋ ಪ್ಲಾಟ್‌ಫಾರ್ಮ್ (Windrow Platform), ಟ್ರಾಮೆಲ್ ಸ್ಕ್ರೀನ್ (Trammel Screen), ಪ್ರೋಸೆಸಿಂಗ್ ಶೆಡ್ (Processing Shed), ಲೀಚೆಟ್ ಟ್ರೀಟ್‌ಮೆಂಟ್ ಸಿಸ್ಟಮ್ (Leachate Treatment System), ಸ್ಯಾನಿಟರಿ ಲ್ಯಾಂಡ್‌ಫಿಲ್ ಸೌಲಭ್ಯಗಳು (Sanitary Landfill Facilities), ಕಾಂಪೌಂಡ್ ಗೋಡೆ, ವೇ-ಬ್ರಿಡ್ಜ್ (Weigh bridge), ಸಂಪರ್ಕ ರಸ್ತೆ ಮತ್ತು ಅಂತರಿಕ ರಸ್ತೆಗಳು ಸೇರಿದಂತೆ ಇತರೆ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br>• ಹಲವಾರು ವರ್ಷಗಳಿಂದ ನಗರ / ಪಟ್ಟಣಗಳಲ್ಲಿ ಶೇಖರಣೆಯಾಗಿರುವ ಪಾರಂಪರಿಕ ತ್ಯಾಜ್ಯ (Legacy Waste) ವಸ್ತುಗಳ ಸಂಸ್ಕರಣೆಗೆ (Bioremediation) ವಿಸ್ತೃತ ಯೋಜನಾ ವರದಿಗಳನ್ನು ಸಿದ್ಧಪಡಿಸಿ, ರಾಜ್ಯ ಉನ್ನತಾಧಿಕಾರ (SBM-U) ಸಮಿತಿಯ ಅನುಮೋದನೆ ಪಡೆದು, ಕೆ.ಟಿ.ಪಿ.ಪಿ (KTPP) ನಿಯಮಾವಳಿಗಳನ್ವಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.<br>• ತ್ಯಾಜ್ಯ ನಿರ್ವಹಣೆಯಲ್ಲಿ ಸಾರ್ವಜನಿಕರ ಪಾತ್ರವನ್ನು ಸಕ್ರಿಯಗೊಳಿಸಲು ಮತ್ತು ಜಾಗೃತಿ ಮೂಡಿಸಲು, ನಗರ ಸ್ಥಳೀಯ ಸಂಸ್ಥೆಗಳ ಮತ್ತು ರಾಜ್ಯಮಟ್ಟದಲ್ಲಿ ವಿವಿಧ |

| | | |
|---|---|---|
| | | ಐ.ಇ.ಸಿ (Information, Education and Communication) ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಚುನಾಯಿತ ಪ್ರತಿನಿಧಿಗಳು, ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಅಧಿಕಾರಿಗಳು, ಪರಿಸರ ಅಭಿಯಂತರರು, ಆರೋಗ್ಯ ನಿರೀಕ್ಷಕರು, ಪೌರಕಾರ್ಮಿಕರು ಮತ್ತು ಸ್ವಚ್ಛತಾ ಕೆಲಸಗಾರರ ಸಾಮರ್ಥ್ಯ ವೃದ್ಧಿಸಲು ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.<br>• ರಾಜ್ಯದ ನಗರ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ, ಪರಿಸರ ಸ್ನೇಹಿ ವಿಧಾನದಲ್ಲಿ ವಿಲೇವಾರಿ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ರಾಜ್ಯದಲ್ಲಿ ಬಿಬಿಎಂಪಿ ಹೊರತುಪಡಿಸಿ 192 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾರಂಪರಿಕ (ಹಳೆಯ) ತ್ಯಾಜ್ಯ ವಸ್ತುಗಳನ್ನು ಹೊಂದಿರುವ ಡಂಪ್‌ಸೈಟ್‌ಗಳನ್ನು ಗುರುತಿಸಿದ್ದು ಒಟ್ಟು ಪಾರಂಪರಿಕ (ಹಳೆಯ) ತ್ಯಾಜ್ಯದ ಪ್ರಮಾಣ ಅಂದಾಜು 75.26 ಲಕ್ಷ ಟನ್ ಗಳಿರುತ್ತದೆ.<br>• ಸದರಿ 192 ನಗರಗಳು ಸಿದ್ಧಪಡಿಸಿದ ಡಿ.ಪಿ.ಆರ್.ಗಳಿಗೆ ರಾಜ್ಯ ಉನ್ನತಾಧಿಕಾರಯುಕ್ತ ಸಮಿತಿ ಅನುಮೋದನೆ ಪಡೆಯಲಾಗಿದೆ. 20,000 ಟನ್‌ಗಳಿಗಿಂತ ಕಡಿಮೆ ಪ್ರಮಾಣದ ಪಾರಂಪರಿಕ ತ್ಯಾಜ್ಯ ಹೊಂದಿರುವ 100 ನಗರಗಳಲ್ಲಿ In-house ಮಾದರಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವತಿಯಿಂದಲೇ ನಿರ್ವಹಣೆ ಮಾಡಲಾಗುತ್ತಿದೆ ಮತ್ತು 20,000 ಟನ್‌ಗಳಿಗಿಂತ ಹೆಚ್ಚು ಪಾರಂಪರಿಕ ತ್ಯಾಜ್ಯ ಹೊಂದಿರುವ 92 ನಗರಗಳು Hire model ಟೆಂಡರ್ ಕರೆದು ಏಜೆನ್ಸಿ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ.<br>• ಪಾರಂಪರಿಕ ತ್ಯಾಜ್ಯ ನಿರ್ವಹಣೆಗೆ ಎಲ್ಲಾ 92 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಟೆಂಡರ್ ಕರೆಯಲಾಗಿದೆ, 43 ನಗರ ಸ್ಥಳೀಯ ಸಂಸ್ಥೆಗಳು ಕಾರ್ಯಾದೇಶ ನೀಡಿ ಕೆಲಸ ಪ್ರಾರಂಭವಾಗಿದ್ದು, ಸದರಿ ನಗರ ಸ್ಥಳೀಯ ಸಂಸ್ಥೆಗಳು ನೀಡಿರುವ ಕಾರ್ಯಾದೇಶದ ಮೊತ್ತದ ವಿವರವನ್ನು **ಅನುಬಂಧ** ದಲ್ಲಿ ಲಗತ್ತಿಸಿದೆ. |

ಸಂ: ನಅಇ 70 ಸಿಎಸ್‌ಎಸ್ 2025

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು

# ಅನುಬಂಧ

| S. N | Name of the district | Name of the ULB | Model | Current Status | Amount for which work order is issued (Amount in lakhs) | Name of the contractor and agency |
|---|---|---|---|---|---|---|
| 1 | Bagalkote | Bagalkote CMC | Hire | Work in Progress | 199.44 | Eagle Services Lathur Maharastra |
| 2 | Bagalkote | Ilkal CMC | Hire | Work in Progress | 143.44 | Z Azad Neptune automation Erode Tamilunadu |
| 3 | Bagalkote | Jamakhandi | Hire | Work in Progress | 191.96 | Z Azad Neptune automation Erode Tamilunadu |
| 4 | Belagavi | Sankeshwar CMC | Hire | Work in Progress | 1786.31 | Mohit Chand Suresh Babu |
| 5 | Bengaluru Rural | Doddaballapur | Hire | Work in Progress | 364.67 | Mr. Z Azad, M/S Neptune automation RSF No.83/3 Pallipalyam Nasiyanur, Erode, Tamilnadu-638107. |
| 6 | Bidar | Basavakalyan | Hire | Work in Progress | 546.30 | Pradeep Hanumant Jadhav |
| 7 | Bidar | Bidar CMC | Hire | Work in Progress | 349.05 | Pradeep Hanumant Jadhav |
| 8 | Chikkamagaluru | Chikkamagaluru | Hire | Work in Progress | 486 | M/s Softberry Solutions, Tamilnadu |
| 9 | Dakshina kannada | Mangaluru CC | Hire | Work in Progress | 5638.52 | NACOF (National Federation of Farmers' Procurement, Processing and Retailing Cooperatives of India Ltd ) |
| 10 | Dakshina kannada | Puttur | Hire | Work in Progress | 300.45 | MSGP Infratech Pvt ltd |
| 11 | Davangere | Davanagere CC | Hire | Work in Progress | 1919.41 | Sri Hardhik Bhikabhai Khunt, M/s D.H.Patel, #B 405, RJD Business hub, Kasanagar Road, Naginvadi,Katargram, Surat |
| 12 | Davangere | Harihar | Hire | Work in Progress | 215.68 | Jan Adhar Seva Bhavi Santha, Lathur-413531(M.S) |

| S. N | Name of the district | Name of the ULB | Model | Current Status | Amount for which work order is issued (Amount in lakhs) | Name of the contractor and agency |
|---|---|---|---|---|---|---|
| 13 | Dharwada | Hubli-Dharwad CC | Hire | Work in Progress | Hubli Kempakere -2346.30 Dharwad Hosayallapur-720.00 | M/s. D H Patel, Surat |
| 14 | Koppala | Gangavathi | Hire | Work in Progress | 296.99 | Jan Adhar Seva Bhavi Santha, Lathur-413531(M.S) |
| 15 | Mysuru | Mysuru CC | Hire | Work in Progress | 5248 | DH patel |
| 16 | Tumakuru | Madhugiri | Hire | Work in Progress | 171.19 | NACOF (National Federation of Farmers' Procurement, Processing and Retailing Cooperatives of India Ltd ) |
| 17 | Tumakuru | Pavagada | Hire | Work in Progress | 148.18 | |
| 18 | Tumakuru | Sira | Hire | Work in Progress | 304.12 | |
| 19 | Tumakuru | Tiptur | Hire | Work in Progress | 316.39 | |
| 20 | Udupi | Karkala | Hire | Work in Progress | 178.88 | |
| 21 | Vijayapura | Basavana Bagevadi | Hire | Work in Progress | 162.33 | The Hind Agro Chemicals |
| 22 | Vijayapura | Indi | Hire | Work in Progress | 219.95 | Neptune Automation |
| 23 | Vijayapura | Muddebihal | Hire | Work in Progress | 198.44 | Neptune Automation |
| 24 | Vijayapura | Talikote | Hire | Work in Progress | 140.16 | Neptune Automation |
| 25 | Yadagiri | Yadgiri CMC | Hire | Work in Progress | 399.67 | Sri Janadhar Seva Sanstha |
| 26 | Gadaga | Gadag-Betageri CMC | Hire | Work in Progress | 460.47 | Saurashtra Enviro Projects PVT LTD |
| 27 | Gadaga | Gajendragad | Hire | Work in Progress | 167.2 | Saurashtra Enviro Projects PVT LTD |
| 28 | Gadaga | Naragunda | Hire | Work in Progress | 130.67 | Saurashtra Enviro Projects PVT LTD |
| 29 | Kodagu | Kushalnagara | Hire | Work in Progress | 1083.94 | Vista core infratech Pvt ltd |
| 30 | Kodagu | Madikeri CMC | Hire | Work in Progress | | |
| 31 | Kodagu | Virajpet | Hire | Work in Progress | | |
| 32 | Kolar | Bangarapet | Hire | Work in Progress | 1359.28 | Utkarsh Balasheb patil( Vistacore Infraprojects Pvt Ltd) |
| 33 | Kolar | Kolar | Hire | Work in Progress | | |
| 34 | Kolar | Malur | Hire | Work in Progress | | |
| 35 | Kolar | Mulabagal | Hire | Work in Progress | | |

| S. N | Name of the district | Name of the ULB | Model | Current Status | Amount for which work order is issued (Amount in lakhs) | Name of the contractor and agency |
|---|---|---|---|---|---|---|
| 36 | Kolar | Robertsonpet | Hire | Work in Progress | | |
| 37 | Vijayapura | Sindhagi | Hire | Work in Progress | LOA issued on 11.3.2025 | Neptune Automation |
| 38 | Ballary | Ballari | Hire | Work in Progress | 1907.96 lakhs | M/S Shaila Chetan Contractor, Saurashtra Enviro Project Pvt Ltd |
| 39 | Belagavi | Belgaum CC | Hire | Work in Progress | 13837.8 | Saurashtra Enviro Projects PVT LTD |
| 40 | Chikkamagaluru | Tarikere | Hire | Work in Progress | 307.64 | Neptune Automation |
| 41 | Dharwada | Kundgol | Hire | Work in Progress | 436.48 | M/s JMS Biotech Private Limited |
| 42 | Dharwada | Navalgund | Hire | Work in Progress | | |
| 43 | Kalaburagi | Afzalpur | Hire | Work in Progress | 266 | Neptune Automation |